ಓ.ಎಸ್. ನಂ. 160/2018

ಪಿ.ಡಬ್ಲ್ಯು: 03(ನಾಗರಾಜ)

ದಿನಾಂಕಃ 20.01.2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀಸವಾಲುಃ ಪ್ರತಿವಾದಿ ಪರ – ಶ್ರೀ TMS ವಕೀಲರಿಂದ.

ನಾನು ನ್ಯಾಯಾಲಯದಲ್ಲಿ ಈಗಾಗಲೇ ಒಂದು ಬೇರೆ ದಾವೆಯಲ್ಲಿ ಸಾಕ್ಷಿ ನುಡಿದಿದ್ದೇನೆ. ನಾನು ವಕೀಲರುಗಳಿಗೆ ದಾವೆಗಳನ್ನು ತಂದು ಕೊಡುತ್ತೇನೆ ಎಂದರೆ ಇಲ್ಲ. ವಾದಿ ಮೃತಪಟ್ಟು 2 ವರ್ಷ ಆಗಿರುತ್ತದೆ. ಆತ ಮೃತಪಟ್ಟಾಗ ಆತನಿಗೆ 75 ವರ್ಷ ಇರಬಹುದು. ಸಿ.ಡಬ್ಲ್ಯೂ:- 01 ರವರ ಹೆಸರು ದುರುಗಪ್ಪ. ಅವರ ತಾಯಿಯ ಹೆಸರು ವಡ್ಡಿನಕಟ್ಟೆ ಹಾಲಮ್ಮ ಆಗಿರುತ್ತದೆ. ವಡ್ಡಿನಕಟ್ಟೆ ಹಾಲಮ್ಮಳ ತಂದೆಯ ಹೆಸರು ವಡ್ಡಿನಕಟ್ಟೆ ಭೀಮಪ್ಪ ಎಂದರೆ ಇರಬಹುದು. ವಡ್ಡಿನಕಟ್ಟೆ ಎಂಬುದು ದುರುಗಪ್ಪ ಅವರ ತಾಯಿಯ ವಂಶದ ಹೆಸರು ಎಂದರೆ ಇರಬಹುದು. ವಾದಿಯವರು ಕಾವಲಿ ವಂಶ ಎಂದರೆ ಸರಿ. ವಡ್ಡಿನಕಟ್ಟೆ ಹಾಲಮ್ಮ ದೇವದಾಸಿ ಎಂದರೆ ಸರಿಯಲ್ಲ. ಆಕೆಗೆ ದೇವದಾಸಿ ಸಂಬಳ ಬರುತ್ತಿತ್ತು ಎಂದರೆ ನನಗೆ ಗೊತ್ತಿಲ್ಲ. ಸುಮಾರು 40 ವರ್ಷದ ಹಿಂದೆ ಮದುವೆ ಆಗಿತ್ತು. ಆಗ ನನಗೆ 18-20 ವರ್ಷ ಇತ್ತು. ಆಕೆ ಮದುವೆಯಾದ ಬಗ್ಗೆ ದಾಖಲಾತಿಯನ್ನು ನಾನು ನೋಡಿರುವುದಿಲ್ಲ. ಆಕೆಗೆ ಮದುವೆಯದಾಗ ದುರುಗಪ್ಪ ಮತ್ತು ಸೊಲ್ಲಪ್ಪರವರಿಗೆ 8-10 ವರ್ಷ ವಯಸ್ಸಿತ್ತು. ದುರುಗಪ್ಪ ಏನು ವಿದ್ಯಾಭ್ಯಾಸ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ದುರುಗಪ್ಪ ಮತ್ತು ಸೊಲ್ಲಪ್ಪರವರು ಸೊಲ್ಲಮ್ಮ ಮಂದಿರ ಸರಕಾರಿ ಪ್ರಾಥಮಿಕ ಶಾಲೆಯಲ್ಲಿ ಓದಿರುತ್ತಾರೆ ಎಂದರೆ ಹೌದು. ಅವರ ಶಾಲಾ ದಾಖಲಾತಿಗಳಲ್ಲಿ ತಾಯಿಯ ಹೆಸರು ಮಾತ್ರ ನಮೂದಾಗಿದೆ ಎಂದರೆ ನನಗೆ ಗೊತ್ತಿಲ್ಲ. ವಾದಿಗೂ ಹಾಗೂ ಹಾಲಮ್ಮನಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಅವರಿಗೆ ಗಂಡ ಹೆಂಡತಿ ಸಂಬಂಧ ಇದೆ. ಆಕೆಗೆ ಮದುವೆಯಾಗಿದೆ ಎಂಬ ವಿಚಾರವನ್ನು ಪ್ರಮಾಣ ಪತ್ರದಲ್ಲಿ ಬರೆಸಿರುವುದಿಲ್ಲ. ನನಗೆ ಹಾಲಮ್ಮರವರು ಸಂಬಂಧಿಕರು. ನಾನು ಅವರ ಸಂಬಂಧಿಕನಾದ ಕಾರಣ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು ಮುಕ್ತಾಯ.

ಮರು-ವಿಚಾರಣೆ ಇಲ್ಲ.

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,

ಕೂಡ್ಲಿಗಿ.